# ಕರ್ನಾಟಕ ಸರ್ಕಾರ

## 2010–11ನೇ ಸಾಲಿನ ವಾರ್ಷಿಕ ವರದಿ
## ಮತ್ತು
## 2010–11ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

# ANNUAL REPORT FOR THE YEAR 2010-11
# and
# PERFORMANCE BUDGET-2010-11

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)**

**Department of Personnel and Administrative Reforms(e-Governance)**

# 2010-11ನೇ ಸಾಲಿನ ವಾರ್ಷಿಕ ವರದಿ
# ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

## 1. ಪರಿಚಯ:

ಸರ್ಕಾರದ ಪ್ರಕ್ರಿಯೆಗಳಲ್ಲಿ ಮಾಹಿತಿ ತಂತ್ರಜ್ಞಾನದ ಸಲಕರಣೆಗಳನ್ನು ಅಳವಡಿಸಿ ಅದರ ಲಾಭವನ್ನು ನಾಗರೀಕರಿಗೆ ಒದಗಿಸುವ ಸಲುವಾಗಿ ಹಾಗೂ ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆಡಳಿತ ಸುಧಾರಣಾ ವಿಭಾಗದಲ್ಲಿ ಸರ್ಕಾರದ ಕಾರ್ಯದರ್ಶಿ, (ಇ-ಆಡಳಿತ) ಹುದ್ದೆಯನ್ನು ಸೃಜಿಸುವ ಮೂಲಕ 2003ರಲ್ಲಿ ಇ-ಆಡಳಿತ ಸಚಿವಾಲಯವನ್ನು ಸ್ಥಾಪಿಸಲಾಯಿತು.

## 1.1 ಉದ್ದೇಶ:

- ವಿಶ್ವದಾದ್ಯಂತ ಇರುವ ಉತ್ಕೃಷ್ಟ ಇ-ಆಡಳಿತ ವಿಷಯಗಳನ್ನು ಅಭ್ಯಸಿಸಿ ಮತ್ತು ಸಂಕಲಿಸಿ ಅವುಗಳನ್ನು ಸರ್ಕಾರದ ಆಡಳಿತಕ್ಕೆ ಅಳವಡಿಸುವುದು.
- ದತ್ತಾಂಶ, ಸಂಗ್ರಹಣಾ ಭದ್ರತೆ, ಪಾವತಿ, ಸ್ಥಳೀಯ ಭಾಷೆಯಲ್ಲಿ ಅಳವಡಿಕೆ(ಕನ್ನಡ ಭಾಷೆ), ಆನ್‌ಲೈನ್ ಖರೀದಿ, ಭೌಗೋಳಿಕ ಮಾಹಿತಿ ಸೇವೆ ಇತ್ಯಾದಿಗಳು ಸೇರಿದಂತೆ ಒಂದು ಮಾನದಂಡವನ್ನು ಅಭಿವೃದ್ಧಿಪಡಿಸುವುದು.
- ವಿವಿಧ ಇಲಾಖೆಗಳಲ್ಲಿ ಇ-ಆಡಳಿತ ಚಟುವಟಿಕೆಗಳಿಗೆ ಸಹಕಾರ ನೀಡುವುದು ಮತ್ತು ಪ್ರೋತ್ಸಾಹಿಸುವುದು.
- ಇ-ಆಡಳಿತದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚಿನ ಇಲಾಖೆಗಳನ್ನು ಸೇರಿಸಿ ಅನುಷ್ಠಾನಗೊಳಿಸುವುದು ಮತ್ತು ಸಮಗ್ರಗೊಳಿಸುವುದು.
- ಇ-ಆಡಳಿತಕ್ಕೆ ಅಗತ್ಯವಿರುವ ಸಾಮಾನ್ಯ ಮಾಹಿತಿ ತಂತ್ರಜ್ಞಾನ ಸೌಲಭ್ಯವನ್ನು ಸೃಷ್ಠಿಸುವುದು ಮತ್ತು ನಿರ್ವಹಿಸುವುದು.
- ಕರ್ನಾಟಕ ರಾಜ್ಯಾದಾದ್ಯಂತ ಮಾಹಿತಿ ತಂತ್ರಜ್ಞಾನದ ನೈಪುಣ್ಯತೆಯನ್ನು ಅಭಿವೃದ್ಧಿಗೊಳಿಸಲು ಒಂದು ತಂತ್ರವನ್ನು ರೂಪಿಸುವುದು.

## 1.2 ಅಧಿಕಾರಿಗಳು:

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಇ-ಆಡಳಿತ), ಇವರು ಮುಖ್ಯಸ್ಥರಾಗಿದ್ದು, ಇವರ ಅಧೀನದಲ್ಲಿ ಸರ್ಕಾರದ ಅಪರ ಕಾರ್ಯದರ್ಶಿ (ಇ-ಆಡಳಿತ) ಮತ್ತು ಇಬ್ಬರು ಪೀಠಾಧಿಕಾರಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನ ನಿರ್ದೇಶನಾಲಯದಿಂದ ಕೆಲವು ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗಿದೆ. ಸಂಸ್ಥೆಯ ನಕಾಶೆ (organization chart) **ಅನುಬಂಧ-1**ರಲ್ಲಿದೆ.

## 1.3 ಅಧೀನ ಕಛೇರಿಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ರ ಅಧೀನದಲ್ಲಿ ಇ-ಆಡಳಿತ ಕೇಂದ್ರ ಮತ್ತು ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ, ಈ ಎರಡು ಅಧೀನ ಕಛೇರಿಗಳಿರುತ್ತವೆ. ಇ-ಆಡಳಿತ ಕೇಂದ್ರವು ಸಂಘಗಳ ನೋಂದಣಿ ಅಧಿನಿಯಮದಡಿ ನೋಂದಾಯಿಸಲಾದ ಸಂಸ್ಥೆಯಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಗೆ ಸಂಬಂಧಿಸಿದ ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಚಾಲನೆ (SECLAN), ರಾಜ್ಯ ದತ್ತ ಕೇಂದ್ರ, ಕರ್ನಾಟಕ ವಿಸ್ತೃತ್ತ ಜಾಲ ಯೋಜನೆ (KSWAN), ಇ-ಸಂಗ್ರಹಣಾ, ಮಾನವ ಸಂಪನ್ಮೂಲ ಯೋಜನೆ(HRMS), ಆಧಾರ್, ಕರ್ನಾಟಕ ರಾಜ್ಯ ವೆಬ್ ಪೋರ್ಟಲ್ ಇತ್ಯಾದಿ ಯೋಜನೆಗಳನ್ನು ಇ-ಆಡಳಿತ ಕೇಂದ್ರದ ಮೂಲಕ ಜಾರಿಗೊಳಿಸಲಾಗುತ್ತಿದೆ. ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯದ ಮೂಲಕ ಗ್ರಾಮೀಣ ಡಿಜಿಟಲ್ ಸೇವೆಗಳು (ನೆಮ್ಮದಿ)ಯೋಜನೆ, ಬೆಂಗಳೂರು ಒನ್ ಸಮಗ್ರ ನಾಗರೀಕ ಸೇವಾ ಕೇಂದ್ರಗಳ ಯೋಜನೆ ಮತ್ತು 2ನೇ ಸ್ಥರದ

ನಗರಗಳಲ್ಲಿ ಕರ್ನಾಟಕ ಒನ್ ಸಮಗ್ರ ನಾಗರೀಕ ಸೇವಾ ಕೇಂದ್ರಗಳ ಯೋಜನೆ, ಇವುಗಳನ್ನು ಜಾರಿಗೊಳಸಲಾಗುತ್ತಿದೆ. ಸಂಸ್ಥೆಯ ನಕಾಶೆ (organization chart) **ಅನುಬಂಧ-1**ರಲ್ಲಿದೆ

2. **ಆಯವ್ಯಯ:**

2010-11ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ `. 2,300.00 (`. ಎರಡು ಸಾವಿರದ ಮೂನ್ನೂರು)ಲಕ್ಷಗಳನ್ನು ಲೆಕ್ಕಶೀರ್ಷಿಕೆ 3451-00-090-2-04-059 ವಿದ್ಯುನ್ಮಾನ ಆಡಳಿತ ಯೋಜನೆ-ಇತರೆ ವೆಚ್ಚಗಳು (ಯೋಜನೆ)ಯಡಿಯಲ್ಲಿ ಮತ್ತು ಯೋಜನೇತರ ಅಡಿಯಲ್ಲಿ `.176.80 (`. ಒಂದು ನೂರ ಎಪ್ಪತ್ತಾರು ಲಕ್ಷ ಎಂಭತ್ತು ಸಾವಿರ) ಲೆಕ್ಕಶೀರ್ಷಿಕೆ 3451-00-090-2-04-059 ವಿದ್ಯುನ್ಮಾನ ಆಡಳಿತ ಯೋಜನೆ-ಇತರೆ ವೆಚ್ಚಗಳು (ಯೋಜನೇತರ)ಯಡಿಯಲ್ಲಿ ಒದಗಿಸಲಾಗಿದೆ.

3. **ಕಾರ್ಯನಿರ್ವಹಣೆ**

2010-11ನೇ ಸಾಲಿನಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ:

3.1.1 **ಇ-ಸಂಗ್ರಹಣಾ ಯೋಜನೆ:-** ಈ ಯೋಜನೆಯನ್ನು ಜಾರಿಗೊಳಿಸುವ ಮೂಲಕ ರಾಜ್ಯ ಸರ್ಕಾರವು, ತನ್ನ ಎಲ್ಲಾ ಸಂಗ್ರಹಣೆಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಅತ್ಯಂತ ಪಾರದರ್ಶಕವಾಗಿ ನಡೆಸಲು ಅನುವಾಗಲು ಇ-ಸಂಗ್ರಹಣಾ ವೇದಿಕೆಯನ್ನು ಲಭ್ಯಪಡಿಸಿದೆ. ಕೇವಲ 6 ಇಲಾಖೆ/ಸಂಸ್ಥೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭವಾದ ಈ ಯೋಜನೆಯು, 90 ಇಲಾಖೆ/ಸಂಸ್ಥೆಗಳಿಗೆ ವಿಸ್ತರಿಸಿದೆ. ಸುಮಾರು `. 49.00 (ನಲ್ವತ್ತೊಂಭತ್ತು) ಸಾವಿರ ಕೋಟಿಗಳ ಮೌಲ್ಯದ ಸಂಗ್ರಹಣೆಗಳನ್ನು ಈ ವೇದಿಕೆಯ ಮುಖಾಂತರ ಮಾಡಲಾಗಿರುತ್ತದೆ. ಈ ವೇದಿಕೆಯಿಂದಾಗಿ ಬಿಡ್‌ದಾರರಲ್ಲಿ ಸ್ಪರ್ಧಾ ಮನೋಭಾವ ಹೆಚ್ಚಿದೆ. ಅಧಿಕ ಸಂಖ್ಯೆಯಲ್ಲಿ ಬಿಡ್‌ದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಅಂದಾಜು ವೆಚ್ಚಕ್ಕಿಂತ ಬಿಡ್ ಮಾಡುವ ಮೊಬಲಗು 10% ರಷ್ಟು ಕಡಿಮೆಯಾಗಿದ್ದು, ಸರ್ಕಾರಕ್ಕೆ `. 6.00 (ಆರು) ಸಾವಿರ ಕೋಟಿ ರೂಪಾಯಿಗಳಿಗೂ ಮಿಗಿಲಾಗಿ ಹಣ ಉಳಿತಾಯವಾಗಿದೆ. ಈ ವೇದಿಕೆಯು ವೆಬ್ ಆಧಾರಿತವಾಗಿದ್ದು ಪ್ರತಿಯೊಬ್ಬ ಬಿಡ್‌ದಾರರು ಯಾವುದೇ ಅಡಚಣೆಯಿಲ್ಲದೆ ಭಾಗವಹಿಸುವ ಅವಕಾಶ ಉಂಟಾಗಿದೆ. 10 ಸಾವಿರಕ್ಕೂ ಮಿಗಿಲಾಗಿ ಬಳಕೆದಾರರು ಈ ವೇದಿಕೆಯಡಿ ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ. ಈ ಯೋಜನೆಯ ಯಶಸ್ಸನ್ನು ಮೆಚ್ಚಿ ಹಲವಾರು ಪುರಸ್ಕಾರಗಳು ಲಭಿಸಿವೆ. ಅವುಗಳ ಪೈಕಿ ಕೆಲವು ಪ್ರಶಸ್ತಿಗಳು ಈ ಕೆಳಕಂಡಂತಿವೆ-

1. CSI-Nihilent e-Governance Award-2009
2. National e-Governance Award-2010
3. Futuregov Award 2010 for Best Practices in Asia’s Public Sector.

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿ.ಎಫ್.ಸಿ 460 | -- | ಟಿ.ಎಫ್.ಸಿ 845.46 | -- | -- | -- |
| ಎನ್.ಐ.ಎಸ್.ಜಿ 79.3 | -- | ಎನ್.ಐ.ಎಸ್.ಜಿ 12.2 | -- | -- | -- |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿಎಫ್‌ಸಿ 48.56 | ಟಿಎಫ್‌ಸಿ 49.3 | ಟಿಎಫ್‌ಸಿ 1199.7 | ಟಿಎಫ್‌ಸಿ 85.29 | -- | -- |
| -- | ಎನ್‌ಐಎಸ್‌ಜಿ 51.74 | ಎನ್‌ಐಎಸ್‌ಜಿ 22.43 | ಎನ್‌ಐಎಸ್‌ಜಿ 22.9 | -- | -- |

ಭೌತಿಕ ಸಾಧನೆ:

| ಮಾನದಂಡ | 2007-08 | 2008-09 | 2009-10 | 2010-11 (ಡಿಸಂಬರ್-2010ರ ವರೆಗೆ) | ಒಟ್ಟು |
|---|---|---|---|---|---|
| ಇಲಾಖೆಗಳು/ ಮಂಡಳಗಳು/ ನಿಗಮಗಳು | 7 | 19 | 31 | 33 | 90 |
| ಸಾರ್ವಜನಿಕ ಉದ್ದಿಮೆಗಳು/ ಕೇಂದ್ರ ಸರ್ಕಾರದ ಸಂಸ್ಥೆಗಳು | -- | -- | 02 | 03 | 05 |
| ನೋಂದಣಿಯಾದ ಸರಬರಾಜುದಾರರು | 130 | 1775 | 4420 | 4882 | 11207 |
| ಪ್ರಕಟಿಸಿದ ಟೆಂಡರ್‌ಗಳ ಸಂಖ್ಯೆ | 15 | 1262 | 4883 | 6975 | 13135 |
| ಪ್ರಕಟಿಸಿದ ಟೆಂಡರ್‌ಗಳ ಮೌಲ್ಯ (`. ಕೋಟಿಗಳಲ್ಲಿ) | 57.32 | 10226.2 | 25630.4 | 12707.18 | 48621.10 |

3.1.2 **ಬೆಂಗಳೂರು-ಒನ್ ಯೋಜನೆ:**

ಎಲ್ಲಾ G2C (ಸರ್ಕಾರದಿಂದ ನಾಗರೀಕರಿಗೆ) ಮತ್ತು B2C (ಖಾಸಗಿಯಿಂದ ನಾಗರೀಕರಿಗೆ) ಸೇವೆಗಳನ್ನು ನಾಗರೀಕರಿಗೆ ಒಂದೇ ಸೂರಿನಡಿ ನೀಡಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ವಾರ್ಡಿಗೊಂದರಂತೆ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರಪ್ರಥಮವಾಗಿ 14 ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ದಿನಾಂಕ: 25.11.2010ರಂದು ಬೆಂಗಳೂರು ನಗರದಲ್ಲಿ 63 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಮುಖವಾಗಿ ಎಲ್ಲಾ ಬಿಲ್ಲುಗಳ, ಕರೆಗಳ ಪಾವತಿ ಇತ್ಯಾದಿ ಸೇವೆಗಳು ಸೇರಿದಂತೆ 40 ಸೇವೆಗಳನ್ನು ಈ ಕೇಂದ್ರಗಳು ಒದಗಿಸುತ್ತಿವೆ. 362.16 ಲಕ್ಷಗಳಷ್ಟು ವಹಿವಾಟುಗಳು (transactions) ಈ ಕೇಂದ್ರಗಳ ಮುಖಾಂತರ ನಡೆದಿದೆ. ಈ ವಹಿವಾಟುಗಳ ಮೌಲ್ಯ ಸುಮಾರು `. 3000 ಕೋಟಿಗಳು ಆಗಿರುತ್ತದೆ. ಈ ಯೋಜನೆಗೆ ಹಲವಾರು ಪ್ರಶಸ್ತಿಗಳು ಲಭಿಸಿದ್ದು, ಇತ್ತೀಚೆಗೆ "ನ್ಯಾಷನಲ್ ವೆಬ್ ರತ್ನ 2009" ಪುರಸ್ಕಾರಕ್ಕೆ ಭಾಜನವಾಗಿದೆ.

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿ.ಎಫ್.ಸಿ 161 | -- | ಟಿ.ಎಫ್.ಸಿ 237.59 | -- | -- | -- |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿಎಫ್‌ಸಿ 48.40 | -- | ಟಿಎಫ್‌ಸಿ 748.34 | ಟಿಎಫ್‌ಸಿ 9.41 | -- | -- |

ಭೌತಿಕ ಸಾಧನೆ:

| ಕ್ರ. ಸಂ | ವಿವರಣೆ | 2008ರ ವರೆಗೆ | 2008-09 | 2009-10 | 2010-11ರ 25ನೇ ಡಿಸಂಬರ್ 2010 | ಪ್ರಗತಿ |
|---|---|---|---|---|---|---|
| 1 | ಸೇರ್ಪಡೆಯಾದ ಕೇಂದ್ರಗಳು | 25 | 11 | 12 | 15 | +38 |
| 2 | ಒಟ್ಟು ವಹಿವಾಟು (ಲಕ್ಷಗಳಲ್ಲಿ) | 119.23 | 76.31 | 96.42 | 74.14 | +127.64 |

### 3.1.3 **ಕರ್ನಾಟಕ-ಒನ್ ಕೇಂದ್ರಗಳು:**

ಬೆಂಗಳೂರು-ಒನ್ ಕೇಂದ್ರಗಳ ಮಾದರಿಯಲ್ಲಿಯೇ 33 ಕರ್ನಾಟಕ ಒನ್ ಕೇಂದ್ರಗಳನ್ನು ರಾಜ್ಯದ 9 ಮಹಾ ನಗರಗಳಾದ ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ, ಬೆಳಗಾಂ, ಬಳ್ಳಾರಿ, ಮೈಸೂರು, ಮಂಗಳೂರು, ದಾವಣಗೆರೆ, ಗುಲ್ಬರ್ಗಾ ಮತ್ತು ತುಮಕೂರಿಗಳಲ್ಲಿ ಸ್ಥಾಪಿಸಲಾಗಿದೆ.

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಯೋಜನೆ 100 | -- | ಯೋಜನೆ 64 | -- | ಯೋಜನೆ 2.50 | -- |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಯೋಜನೆ 65.73 | -- | ಯೋಜನೆ 4.98 | ಯೋಜನೆ 30 | ಯೋಜನೆ 2.35 | ಯೋಜನೆ 0.15 |

ಭೌತಿಕ ಸಾದನೆಗಳು:

| ಕ್ರ. ಸಂ | ವಿವರಣೆಗಳು | 2008ರ ವರೆಗೆ | 2008-09 | 2009-10 | 2010-11 25ನೇ ಡಿಸಂಬರ್ 2010ರ ವರೆಗೆ | ಪ್ರಗತಿ |
|---|---|---|---|---|---|---|
| 1 | ನಗರಗಳ ಸಂಖ್ಯೆ | 1 | -- | 1 | 7 | +8 |
| 2 | ಸೇರ್ಪಡೆಯಾದ ಕೇಂದ್ರಗಳು | 1 | 2 | 4 | 26 | +32 |
| 3 | ಒಟ್ಟು ವಹಿವಾಟು (ಲಕ್ಷಗಳಲ್ಲಿ) | 0.51 | 1.50 | 5.21 | 7.83 | +14.54 |

### 3.1.4 **ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆ:**

178 ಕೋಟಿ ರೂ.ಗಳು ಮೀರಿದ ವೆಚ್ಚದ ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆಯನ್ನು ದಿನಾಂಕ: 07.12.2009 ರಂದು ಉದ್ಘಾಟಿಸಲಾಯಿತು. ಈ ಯೋಜನೆಯಡಿಯಲ್ಲಿ ಒಂದು ಬೃಹತ್ ಸಂಪರ್ಕ ಜಾಲವನ್ನು ಸ್ಥಾಪಿಸಲಾಗಿದೆ. ಈ ಯೋಜನೆಯಡಿ ಧ್ವನಿ, ಮಾಹಿತಿ ಮತ್ತು ದೃಶ್ಯ ಸೇವೆಗಳನ್ನು ಒದಗಿಸಲಾಗಿದೆ. ಈ ಸೇವೆಗಳ ಮೂಲಕ ಎಲ್ಲಾ ಜಿಲ್ಲಾ ಕೇಂದ್ರ ಸ್ಥಾನಗಳನ್ನು ರಾಜ್ಯ ಕೇಂದ್ರ ಸ್ಥಾನದೊಂದಿಗೆ ಜೋಡಿಸಲಾಗಿದೆ. ಈ ಯೋಜನೆಯಡಿಯಲ್ಲಿ 56 ಇಲಾಖೆಗಳ 2400 ಸರ್ಕಾರಿ ಕಚೇರಿಗಳ ಮಧ್ಯೆ ಸಂಪರ್ಕವನ್ನು

ಸಾಧಿಸಲಾಗಿದೆ. 2900 ಕ್ಕೂ ಮಿಗಿಲಾಗಿ ಕಛೇರಿಗಳಿಗೆ ಐ.ಪಿ. ಫೋನ್‌ಗಳನ್ನು ಅಳವಡಿಸಲಾಗಿದೆ. 126 ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ವ್ಯವಹಾರ ಕೇಂದ್ರ (Government Business Centres) ಗಳನ್ನು ಸ್ಥಾಪಿಸಿದ್ದು, ಅದರ ಸೇವೆಯನ್ನು ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿರುವ ಎಲ್ಲಾ ಕಛೇರಿಗಳು ಪಡೆಯಬಹುದಾಗಿದೆ.

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿಎಫ್‌ಸಿ 723.39 | -- | ಟಿಎಫ್‌ಸಿ 545 | -- | -- | -- |
| -- | -- | ಯೋಜನೆ 5 | -- | ಯೋಜನೆ 435 | -- |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| -- | -- | ಟಿಎಫ್‌ಸಿ 1894.57 | ಟಿಎಫ್‌ಸಿ 1157.01 | -- | -- |
| ಡಿಐಟಿ 1.08 | ಡಿಐಟಿ 34 | -- | ಡಿಐಟಿ 72.33 | -- | ಡಿಐಟಿ 842.5 |
| -- | -- | -- | -- | -- | ಯೋಜನೆ 440 |

ಭೌತಿಕ ಸಾಧನೆಗಳು:

- (ಅ) ಪಾಯಿಂಟ್ ಆಫ್ ಪ್ರೆಸೆನ್ಸ್ – 179
- (ಆ) ರಿಮೋಟ್ ಕಚೇರಿಗಳು 2400
- (ಇ) ಸರ್ಕಾರಿ ಸಮನ್ವಯ ಕೇಂದ್ರ (ಜಿ.ಬಿ.ಸಿ)-126
- (ಈ) ತಂತ್ರಾಂಶಗಳ ಸಂಖ್ಯೆ 14. ಉದಾಹರಣೆಗೆ, ಭೂಮಿ, ಖಜಾನೆ, ಇ-ಸಂಗ್ರಹಣ, ಹೆಚ್‌ಆರ್‌ಎಂಎಸ್, ಕಾವೇರಿ, ನ್ಯಾಯಾಂಗ ಕೃಷಿ ಸಾರಿಗೆ, ನಗರಾಭಿವೃದ್ಧಿ ಆಹಾರ ಮತ್ತು ನಾಗರೀಕ ಸರಬರಾಜು ಇತ್ಯಾದಿ
- (ಉ) ಕರ್ನಾಟಕ ವಿಸ್ತೃತ್ತ ಜಾಲ ಯೋಜನೆಯನ್ನು ಬಳಸುತ್ತಿರುವ ಇಲಾಖೆಗಳು – 56
- (ಊ) ಇಲಾಖೆಗಳು ವಿಡಿಯೋ ಕಾನ್ಫರೆನ್ಸಿಂಗ್ ನಡೆಯುತ್ತಿದ್ದು, ಮಾನ್ಯ ಮುಖ್ಯಮಂತ್ರಿಗಳು, ಸಚಿವರುಗಳು, ಮುಖ್ಯ ಕಾರ್ಯದರ್ಶಿಗಳು ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರುಗಳು ಈ ಮಾಧ್ಯಮವನ್ನು ಸಕ್ರಿಯವಾಗಿ ಬಳಸುತ್ತಿದ್ದಾರೆ.

### 3.1.5 ಆಧಾರ್ (ಯುಐಡಿ) ಯೋಜನೆ:

ದೇಶದ ಬಹು ಮಹತ್ವಾಕಾಂಕ್ಷೆ ಯೋಜನೆಯಾದ "ಆಧಾರ್" ಯೋಜನೆಯನ್ನು ದಿನಾಂಕ 08.10.2010 ರಂದು ಉದ್ಘಾಟಿಸಲಾಗಿದೆ. ರಾಜ್ಯದ ಸುಮಾರು 6 ಕೋಟಿ ನಿವಾಸಿಗಳಿಗೆ ಅದ್ವಿತೀಯ ಗುರುತಿನ ಸಂಖ್ಯೆಗಳನ್ನು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಪ್ರಾಯೋಗಿಕವಾಗಿ ಮೈಸೂರು ಮತ್ತು ತುಮಕೂರು, ಈ ಎರಡು ಜಿಲ್ಲೆಗಳಲ್ಲಿ ಇದನ್ನು ಜಾರಿಗೊಳಿಸಲಾಗುತ್ತಿದೆ. ದಿನಾಂಕ: 14.02.2011ರ ವರೆಗೆ

16,13,704 ನಿವಾಸಿಗಳು ಈಗಾಗಲೇ ಅದ್ವಿತೀಯ ಗುರುತಿನ ಸಂಖ್ಯೆಗಾಗಿ ನೊಂದಾಯಿಸಿರುತ್ತಾರೆ. ನೋಂದಣಿ ಪ್ರಕ್ರಿಯೆಗೆ ಉತ್ತಮ ಪ್ರತಿಕ್ರಿಯೆ ದೊರೆತಿರುತ್ತದೆ. ಈ ಯೋಜನೆಯಿಂದಾಗಿ ನಾಗರೀಕರಿಗೆ ಸೇವೆಗಳು ಯಾರಿಗೆ ತಲುಪಬೇಕಾಗಿದೆಯೋ, ಅವರಿಗೇ ನೇರವಾಗಿ ತಲುಪಿಸುವ ಕೆಲಸ ಅತ್ಯಂತ ಪರಿಣಾಮಕಾರಿ ಮತ್ತು ವ್ಯವಸ್ಥಿತವಾಗಿ ಜರುಗಲಿದೆ.

### 3.1.6 **ರಾಜ್ಯ ದತ್ತ ಕೇಂದ್ರ**

ಟಯರ್ – 3 ಮಾದರಿಯ ರಾಜ್ಯ ದತ್ತ ಕೇಂದ್ರವು 2004 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲಾಖೆಗಳ ಮಾಹಿತಿಯನ್ನು ಈ ಕೇಂದ್ರವು ಕೇಂದ್ರೀಕೃತವಾಗಿಸಿದೆ. 53 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಸಕ್ತ ದತ್ತ ಕೇಂದ್ರಕ್ಕಿಂತ 3 ಪಟ್ಟು ದೊಡ್ಡದಾದ ದತ್ತ ಕೇಂದ್ರವೊಂದನ್ನು ವಿಕಾಸಸೌಧದಲ್ಲಿ ಸ್ಥಾಪಿಸಲಾಗುವುದು.

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿಎಫ್‌ಸಿ 242 | -- | ಟಿಎಫ್‌ಸಿ 637.82 | -- | -- | -- |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಟಿಎಫ್‌ಸಿ 149.92 | -- | ಟಿಎಫ್‌ಸಿ 833.53 | ಟಿಎಫ್‌ಸಿ 1.43 | -- | -- |

**ಭೌತಿಕ ಸಾದನೆಗಳು:**

| ಕ್ರ. ಸಂ | ವಿವರಗಳು | 2008ರ ವರೆಗೆ | 2008-09 | 2009-10 | 2010-11 25ನೇ ಡಿಸಂಬರ್ 2010ರ ವರೆಗೆ | ಪ್ರಗತಿ |
|---|---|---|---|---|---|---|
| 1 | ಅಳವಡಿಸಲಾದ ತಂತ್ರಾಂಶಗಳ ಸಂಖ್ಯೆ | 04 | 10 | 13 | 08 | +31 |
| 2 | ಬಳಸುತ್ತಿರುವ ಇಲಾಖೆಗಳ ಸಂಖ್ಯೆ | 02 | 05 | 08 | 05 | +18 |

### 3.1.7 **ಮಾನವ ಸಂಪನ್ಮೂಲ ವ್ಯವಸ್ಥಾ ಪದ್ಧತಿ** (HRMS):

ವಿಶ್ವ ಬ್ಯಾಂಕಿನ ಸಹಕಾರದೊಂದಿಗೆ ಪ್ರಾರಂಭವಾದ ಈ ಯೋಜನೆ ಕಳೆದ 1000 ದಿನಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕಂಡಿದೆ. 19,200 ವೇತನ ಬಟವಾಡೆ ಅಧಿಕಾರಿಗಳು ತಮ್ಮ ಅಧೀನದಲ್ಲಿರುವ ಎಲ್ಲಾ ಸರ್ಕಾರಿ ನೌಕರರಿಗೆ ವಿದ್ಯುನ್ಮಾನ ಮುಖಾಂತರ ವೇತನವನ್ನು ಬಟವಾಡೆ ಮಾಡುತ್ತಿದ್ದಾರೆ. ಅಲ್ಲದೆ ಎಲ್ಲಾ ಸರ್ಕಾರಿ ನೌಕರರ ಸೇವಾ ಪುಸ್ತಕಗಳಲ್ಲಿನ ವಿವರಗಳನ್ನು ಗಣಕೀಕರಣ ಮಾಡಲಾಗಿದೆ. ಇದರಿಂದಾಗಿ ಮುಂಬರುವ ದಿನಗಳಲ್ಲಿ ಸರ್ಕಾರಿ ನೌಕರರ ಪಿಂಚಣಿಯು ಅವರು ನಿವೃತ್ತಿಯಾದ ದಿನವೇ ವಿತರಣೆಯಾಗಲಿದೆ. ಈ ಯೋಜನೆಯನ್ನು ಹಲವಾರು ನಿಗಮ ಮತ್ತು ಮಂಡಳಗಳಿಗೆ ವಿಸ್ತರಿಸಲಾಗಿದೆ. ಜೊತೆಗೆ ಆಂಧ್ರಪ್ರದೇಶ ಸರ್ಕಾರವು ಈ

ಯೋಜನೆಯನ್ನು ಆಂಧ್ರಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರದೊಂದಿಗೆ ಸಮಾಲೋಚಿಸುತ್ತಿದೆ. ಈ ಯೋಜನೆಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಅವುಗಳ ಪೈಕಿ ಕೆಲವು ಪ್ರಶಸ್ತಿಗಳು ಈ ಕೆಳಕಂಡಂತಿವೆ-

- CSI-Nihilent e-Governance Award-2009
- National e-Governance Award-2010

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| -- | ಯೋಜನೆ 100 | -- | ಯೊಜನೆ 166.25 | -- | ಯೋಜನೆ 25 |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| -- | ಯೋಜನೆ 9 | -- | ಯೋಜನೆ 249.48 | -- | ಯೋಜನೆ 25 |

ಭೌತಿಕ ಸಾದನೆಗಳು:

| ಹೆಚ್ ಆರ್ ಎಂ ಎಸ್ ಯೋಜನೆಯ ಪ್ರಮುಖ ಸಾಧನೆಗಳು | | | |
|---|---|---|---|
| ಕ್ರ. ಸಂ | 2008-09 | 2009-10 | 2010-11 |
| 1 | ವೇತನ ಬಿಲ್ಲನ್ನು ಪ್ರಾಯೋಗಿಕವಾಗಿ ಬಳಸಿ ರಾಜ್ಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ವಿಸ್ತರಣೆ | ರಾಜಭವನ ಮತ್ತು ಐಆರ್‌ಎಲ್‌ಎ ಹೆಚ್‌ಆರ್‌ಎಂಎಸ್‌ಗೆ ಸೇರ್ಪಡೆ | ಅನುದಾನಿತ ವಿದ್ಯಾಸಂಸ್ಥೆಗಳ ಸುಮಾರು 70,000 ಸಿಬ್ಬಂದಿಗಳು ಸೇರ್ಪಡೆ |
| 2 | ಸುಮಾರು 5.00 ಲಕ್ಷ ಉದ್ಯೋಗಿಗಳ ಸೇವಾ ಪುಸ್ತಕದಲ್ಲಿನ ಮಾಹಿತಿ ಸಂಗ್ರಹಣೆ/ಇಂದೀಕರಣ | ಖಜಾನೆ ತಂತ್ರಾಂಶದೊಡನೆ ಹೆಚ್‌ಆರ್‌ಎಂಎಸ್ ಸಂಯೋಜನೆ | ಬಾಕಿ ವೇತನದ ಬಿಲ್ಲುಗಳ ತಯಾರಿಕೆ |
| 3 | ಮಂಡ್ಯ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ವರ್ಗಾವಣೆ, ಬಡ್ತಿ, ಇತರೇ ವರದಿಗಳ ತಯಾರಿಕೆ ಬಗ್ಗೆ ಅಧ್ಯಯನ | ರಾಜ್ಯ ಜಿಲ್ಲಾ ಮಟ್ಟದಲ್ಲಿ 5,000 ಇಲಾಖಾ ಮುಖ್ಯಸ್ಥರು ಮತ್ತು ಬಟವಾಡೆ ಅಧಿಕಾರಿಗಳಿಗೆ ಕಾರ್ಯಾಗಾರಗಳು | ರಾಜ್ಯದಲ್ಲಿನ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡುವುದರ ಮುಖಾಂತರ ಅವರ ಸಾಮರ್ಥ್ಯ ವರ್ದನೆ |
| 4 | ಫೆಬ್ರವರಿ 2008ರ ಮಾಹೆಯಲ್ಲಿ ರಾಜ್ಯಾದ್ಯಂತ ಹೆಚ್‌ಆರ್‌ಎಂಎಸ್ ತಂತ್ರಾಂಶ ಅನುಷ್ಟಾನ | ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕೈಪಿಡಿಯ ವಿತರಣೆ | ನೂತನ ಪಿಂಚಣಿ ಯೋಜನೆ ಅನುಷ್ಟಾನ |
| 5 | ಸಾಮರ್ಥ್ಯ ವರ್ದನೆಯ ಹೆಜ್ಜೆಯಾಗಿ 3,000 ಮಾಸ್ಟರ್ ಟ್ರೈನರ್‌ಗಳ ತರಬೇತಿ | ಭವಿಷ್ಯ ನಿಧಿ, ಜೀವವಿಮೆ, ಇತ್ಯಾದಿ ಮಾಹಿತಿಗಳಗಾಗಿ ಅಕೌಂಟೆಂಟ್ ಜನರಲ್ ಮತ್ತು ಕೆಜಿಐಡಿ ಇಲಾಖೆಗಳಿಗೆ ಪ್ರವೇಶಾವಕಾಶ | "ಸಿಎಸ್ಐ ನಿಹಲೆಂಟ್" ಪುರಸ್ಕಾರ |

### 3.1.8 ವಿದ್ಯುನ್ಮಾನ ನಮೂನೆಗಳು(e-forms):

ವಿದ್ಯುನ್ಮಾನ ನಮೂನೆಗಳ(e-forms) ಯೋಜನೆಯಡಿಯಲ್ಲಿ, ವಿವಿಧ ಸರ್ಕಾರಿ ಇಲಾಖೆಗಳು ಸಾರ್ವಜನಿಕರಿಗೆ ನೀಡುವ ಸೌಲಭ್ಯ/ಸೇವೆಗಳಿಗೆ ಸಂಬಂಧಿಸಿದಂತೆ ವಿದ್ಯುನ್ಮಾನ ಮೂಲಕ ನಮೂನೆಗಳನ್ನು ಸಲ್ಲಿಸಲು ಅನುವು ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಈ ರೀತಿ ವಿದ್ಯುನ್ಮಾನ ಮೂಲಕ ನಮೂನೆಗಳನ್ನು ತುಂಬಿ ಅವುಗಳನ್ನು ಸಲ್ಲಿಸುವುದರಿಂದ ನಾಗರೀಕರು ಮತ್ತು ಎಲ್ಲಿಂದಾದರು ಮತ್ತು ಯಾವ ಸಮಯದಲ್ಲಾದರು ಸರ್ಕಾರಿ ಸೇವೆಗಳನ್ನು ಪಡೆಯಬಹುದಾಗಿದೆ. ಪ್ರಸ್ತುತ 408 ಅರ್ಜಿ ನಮೂನೆಗಳು ರಾಜ್ಯದ ವೆಬ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತವೆ.

3.1.9ಮೊದಲನೇ ಹಂತದಲ್ಲಿ ನಾಗರೀಕರು, ಅರ್ಜಿಗಳನ್ನು ಡೌನ್‌ಲೋಡ್ (download) ಮಾಡಿಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವ ಕಾರ್ಯತಂತ್ರವನ್ನು ಸಹ ರೂಪಿಸಲಾಗುತ್ತಿದೆ.

## 3.2 ಇತರೆ ಚಟುವಟಿಕೆಗಳು

### 3.2.1 ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಜಾಲನೆ (SECLAN):

ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳು ವಿಧಾನ ಸೌಧ, ವಿಕಾಸ ಸೌಧ ಮತ್ತು ಬಹುಮಹಡಿಗಳ ಕಟ್ಟಡದಲ್ಲಿರುತ್ತವೆ. ಕರ್ನಾಟಕ ಸರ್ಕಾರದ ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಬಳಕೆಯಲ್ಲಿರುವ ಗಣಕಯಂತ್ರಗಳನ್ನು ಸಂಪರ್ಕಿಸುವಂತಹ ಲ್ಯಾನ್, ಅತ್ಯಂತ ವಿಶಾಲವಾದ, ಸುಮಾರು 3000 ನೋಡ್‌ಗಳನ್ನು ಜೋಡಿಸುವ ಲ್ಯಾನ್ ಆಗಿರುತ್ತದೆ. ಈ ಲ್ಯಾನ್ ಅನ್ನು 2001ನೇ ಸಾಲಿನಲ್ಲಿ ಸ್ಥಾಪಿಸಲಾಯಿತು. ಹಾಲಿ ಇರುವ ಲ್ಯಾನ್ ಅನ್ನು ಉನ್ನತೀಕರಿಸಿ ವಿಸ್ತರಿಸಲು, ಟೆಂಡರ್ ಕರೆದು ಮೆ॥ ಟಿಸಿಎಸ್ ಸಂಸ್ಥೆಗೆ ಆದೇಶ ನೀಡಲಾಗಿದ್ದು, ಕಾರ್ಯವು ಪೂರ್ಣಗೊಂಡಿದೆ.

ಆರ್ಥಿಕ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಯೋಜನೆ | -- | -- | -- | 93.75 | -- |

ವೆಚ್ಚ: (`. ಲಕ್ಷಗಳಲ್ಲಿ)

| 2008-09 | | ಪರಿಷ್ಕೃತ ಅಂದಾಜು 2009-10 | | ಆಯವ್ಯಯ ಅಂದಾಜು 2010-11 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಯೋಜನೆ | -- | -- | -- | 70.13 | -- |

### 3.2.2 ಸಚಿವಾಲಯದ ಆಟೋಮೇಷನ್:

ಕರ್ನಾಟಕ ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಕಡತಗಳ ಚಲನವಲನ ಮತ್ತು ಬಾಕಿ ಇರುವ ಪತ್ರಗಳ ದಾರಿ ಗುರುತಿಸಲು ಕಡತ ನಿರ್ವಹಣೆ ವ್ಯವಸ್ಥೆ ಮತ್ತು ಪತ್ರ ನಿರ್ವಹಣೆ ವ್ಯವಸ್ಥೆ ಎಂಬ ತಂತ್ರಾಂಶಗಳನ್ನು ಚಾಲನೆಗೊಳಿಸಲಾಗಿದೆ. ದಸ್ತಾವೇಜು ನಿರ್ವಹಣಾ ವ್ಯವಸ್ಥೆ ಹಾಗೂ ನ್ಯಾಯಾಲಯ ಪ್ರಕರಣಗಳ ನಿರ್ವಹಣಾ ವ್ಯವಸ್ಥೆ ಪ್ಯಾಕೇಜುಗಳನ್ನೂ ಸಹ ಚಾಲನೆಗೊಳಿಸಲಾಗಿದೆ. ಈ ಪದ್ಧತಿಯಡಿಯಲ್ಲಿ ಸಚಿವಾಲಯದ ಇಲಾಖೆಗಳು ಜನಸಾಮಾನ್ಯರ ಮತ್ತು ಸರ್ಕಾರದ ಅಧಿಕಾರಿಗಳು/ ಸಿಬ್ಬಂದಿ ವರ್ಗದವರ ಉಪಯೋಗಕ್ಕಾಗಿ ತಮ್ಮ ಸರ್ಕಾರದ ಆದೇಶಗಳು, ಸುತ್ತೋಲೆಗಳು, ಅಧಿಸೂಚನೆಗಳು ಮತ್ತು ತಿದ್ದೋಲೆ ಅಥವಾ ಸೇರ್ಪಡೆಗಳನ್ನು ವೆಬ್‌ಸೈಟ್‌ನಲ್ಲಿ

ಅಳವಡಿಸಬಹುದಾಗಿದೆ. ಸಚಿವಾಲಯದ ಸಿಬ್ಬಂದಿಗೆ ಈ ಎಲ್ಲಾ ಪ್ಯಾಕೇಜುಗಳಲ್ಲಿ ವ್ಯಾಪಕವಾದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

3.2.3. **<u>ಮಿದು ಸಮಯ ವ್ಯವಸ್ಥೆ:</u>**

ಸಚಿವಾಲಯದ ಶಾಖಾಧಿಕಾರಿಗಳು ಮತ್ತು ಮೇಲ್ಪಟ್ಟ ಅಧಿಕಾರಿಗಳು ಸಮಯವನ್ನು ಅತ್ಯುತ್ತಮವಾಗಿ ಉಪಯೋಗಿಸಲು ಮತ್ತು ಕಾರ್ಯದಕ್ಷತೆ ಹೆಚ್ಚಿಸಲು ಮಿದು ಸಮಯ ಯೋಜನೆಯನ್ನು ಯಶಸ್ವಿಯಾಗಿ ಚಾಲನೆಗೊಳಿಸಲಾಗಿದೆ. ಈ ಪದ್ಧತಿಯಿಂದ ಅಧಿಕಾರಿಗಳು ಪಟ್ಟ ಶ್ರಮವನ್ನು ಗುರುತಿಸಬಹುದಾಗಿದ್ದು, ಇದು 2004ರಿಂದ ಯಶಸ್ವಿಯಾಗಿ ಚಾಲ್ತಿಯಲ್ಲಿದೆ. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಬೆರಳಚ್ಚು ಆಧಾರಿತ ಬಯೋಮೆಟ್ರಿಕ್ ರೀಡರ್‌ಗಳನ್ನು ಅಳವಡಿಸಲಾಗಿದೆ.

3.2.4 **<u>ಸಾಮರ್ಥ್ಯ ವರ್ಧನೆ:</u>**

ಅ) ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಇ-ಸಂಗ್ರಹಣಾ ವೇದಿಕೆಯನ್ನು ಬಳಸಲು ತರಬೇತಿಯನ್ನು ನೀಡಲಾಗಿದೆ.

ಆ) ಗ್ರಾಮೀಣ ಮಟ್ಟದಲ್ಲಿ ವಾಸ್ತವ ಕಛೇರಿಗಳ ಪರಿಕಲ್ಪನೆಯ ಬಗ್ಗೆ ಅರ್ಥೈಸಲು ನೆಮ್ಮದಿ ಕಾರ್ಯಕ್ರಮದಡಿಯಲ್ಲಿ ಕ್ಷೇತ್ರ ಮಟ್ಟದ ಸಿಬ್ಬಂದಿ ವರ್ಗದವರಿಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆಯನ್ನು (HRMS) ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಸಂಪೂರ್ಣವಾಗಿ ಚಾಲನೆಗೊಳಿಸಲಾಗಿದ್ದು, ಅದೇ ರೀತಿಯಾಗಿ ಸುಮಾರು 20,000 ಬಟವಾಡೆ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ ಆನ್‌ಲೈನ್‌ನಲ್ಲಿ ಸಂಬಳದ ಬಿಲ್ಲುಗಳನ್ನು ತಯಾರಿಸಲು ತರಬೇತಿಯನ್ನು ನೀಡಲಾಗಿದೆ. ಸೇವಾ ವಿವರಗಳನ್ನು ಇಂದೀಕರಿಸುವ ಬಗ್ಗೆ ಬಟವಾಡೆ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ ಅರಿವು ಮಾಡಲು ಕಾರ್ಯಾಗಾರಗಳನ್ನು ಜಿಲ್ಲಾ ಮಟ್ಟದಲ್ಲಿ ನಡೆಸಲಾಗಿದೆ.

3.2.5 **<u>ಇ-ಆಡಳಿತ ಯೋಜನೆಗಳ ಅನುಮೋದನೆ:</u>**

ವಿವಿಧ ಇಲಾಖೆಗಳ ಇ-ಆಡಳಿತ ಯೋಜನೆಗಳ ಸಮರ್ಪಕ ರಚನೆ, ಅನುಮೋದನೆ ಮತ್ತು ಅನುಷ್ಠಾನಗಳ ಬಗ್ಗೆ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ. ಈ ಕಾರ್ಯ ವಿಧಾನದನ್ವಯ ಪ್ರತಿ ಇಲಾಖೆಯು, ಆಯಾಯ ವರ್ಷದಲ್ಲಿ ಕೈಗೊಳ್ಳುವ ಗಣಕೀಕರಣ ಯೋಜನೆಗಳನ್ನು ಒಳಗೊಂಡ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸ ಬೇಕಾಗಿರುತ್ತದೆ. ಈ ಕ್ರಿಯಾ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) ಮತ್ತು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗಳಿಗೆ ಈ ಕೆಳಕಂಡಂತೆ ನೀಡಲಾಗಿದೆ:-

(ಅ) ` 1.00 (ಒಂದು) ಕೋಟಿ ವರೆಗೆ ಮತ್ತು ಅದಕ್ಕೆ ಸಮಾನ ವೆಚ್ಚವಾಗುವ ಇ-ಆಡಳಿತ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗೆ ನೀಡಲಾಗಿದೆ: ಮತ್ತು

(ಆ) ` 1.00 (ಒಂದು) ಕೋಟಿಗಿಂತ ಹೆಚ್ಚಿನ ವೆಚ್ಚವಾಗುವ ಇ-ಆಡಳಿತ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿರುವ ಸಮಿತಿಗೆ ನೀಡಲಾಗಿದೆ.

ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಲಭ್ಯಗಳನ್ನು ಸೃಜಿಸುವುದಲ್ಲಿ ಆಗಬಹುದಾದ ಡ್ಯೂಪ್ಲಿಕೇಷನ್‌ವನ್ನು ತಡೆಗಟ್ಟಲು ಮತ್ತು ರಾಜ್ಯ ಮಾಹಿತಿ ಕೇಂದ್ರದಂತಹ ಈಗಾಗಲೇ ಸ್ಥಾಪಿಸಲ್ಪಟ್ಟ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳಿಂದ ಹೆಚ್ಚಿನ ಉಪಯುಕ್ತತೆಗೆ ಇದರಿಂದ ಅನುಕೂಲವಾಗುತ್ತದೆ.

**3.2.6** 2010-11ರಲ್ಲಿ ಒಟ್ಟಾರೆ 30 ಇಲಾಖೆಗಳ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದೆ. ಇವುಗಳ ಪೈಕಿ, 13 ಇಲಾಖೆಗಳ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಅಧಿಕಾರಯುಕ್ತ ಸಮಿತಿಯು ಅನುಮೋದಿಸಿದೆ. ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಯ ಅಂದಾಜು ಮೌಲ್ಯ ` 35850 ಲಕ್ಷಗಳಾಗಿರುತ್ತದೆ.

* * * *

*ANNUAL REPORT FOR THE YEAR 2010-11*
*Department of Personnel and Administrative Reforms(e-Governance)*

1. ***Introduction:***

A separate e-Governance secretariat was established by creating the post of Secretary to Government (e-Governance) in the Administrative Reforms wing of the Department of Personnel and Administrative Reforms in the year 2003 with a view to accelerate the process of IT-enabling of Government processes for the benefit of the citizens and for increasing the transparency and efficiency in administration

***1.1 Objectives:***

- To set a benchmark for Government by studying and compiling the best practices in e-Governance across the world.
- To develop standards relating to database, storage security, payment, interoperability, localization (Kannada language), online procurement, GIS etc.
- To assist and promote e-Governance activities in various departments
- To implement and integrate e-Governance process covering more than one department.
- To create and maintain common IT infrastructure required for e-Governance.
- To create a sustainable mechanism for development of IT skills throughout the Karnataka State.

***1.2 Officers:***

Principal Secretary to Government (e-Governance) is the head of the e-Governance secretariat assisted by an Additional Secretary to Government (e-Governance) and two Desk Officers. The services of some officers and staff of the Directorate of Information Technology have also been obtained. Organization chart is at **Annexure-1.**

***1.3 Subordinate Offices:***

There are two subordinate offices, namely, Centre for e-Governance and Directorate of Electronic Delivery of Citizen Services under Department of Personnel and Administrative Reforms (e-Governance). Centre for e-Governance is a society registered under the Registration of Societies Act. It implements various projects of the Department of Personnel and Administrative Reforms (e-Governance) such as the Karnataka Government Secretariat Local Area Network (SECLAN), State Data Centre, Karnataka State Wide Area Network (KSWAN), e-Procurement, Human Resource Management System (HRMS), Aadhaar, Karnataka State Web Portal etc. The Directorate of Electronic Delivery of Citizen Services implements Rural Digital Services (Nemmadi) Project, Bangalore One- Integrated Citizen Service Centers Project and Karnataka One-Integrated Citizen Service Centers Project in tier two cities of Karnataka. Organization chart is at **Annexure-1.**

2. ***Budget:***

During the year 2010-11, an amount of `. 2300.00 lakhs (Two thousand Three hundred

lakhs) was provided under the head of account 3451-00-090-2-04-059 e-Governance Project-other expenses (plan) and an amount of `.176.80 lakhs (One hundred seventy six lakhs and eighty thousand) was provided under non-plan under the head of account 3451-00-090-2-04-059 e-Governance Project-other expenses (non-plan).

## 3. *Performance:*

During the year 2010-11, the following activities were undertaken:-

### *3.1 Common Projects Cutting Across Departments:*

#### *3.1.1* <u>e-Procurement Project:</u>

By implementing this project, the State Government has provided e-Procurement platform for all its procurements to be made transparently through the electronic mode. Started in six departments/organizations on a pilot basis, this scheme has been extended to 90 departments/organizations. Procurements valued at about `.49,000 crores have made through this platform. This platform has enhanced competition among the bidders and more bidders are participating in the tendering process, resulting in reduction of about 10% in bid amount vis-a-vis the estimated expenditure. This has saved over `. 6,000 crores to Government. This being a web based solution, any bidder can participate without any hindrance/entry barriers. Over 10,000 users are registered on the platform. The project has bagged several awards. Some of them are:

(1) CSI-Nihilent e-Governance Award 2009
(2) National e-Governance Award 2010
(3) Futuregov Award 2010 for Best Practices in Asia's Public Sector

**Financial : (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 460 | -- | TFC 845.46 | -- | -- | -- |
| NISG 79.3 | -- | NISG 12.2 | -- | -- | -- |

**Expenditure: (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 48.56 | TFC 49.3 | TFC 1199.7 | TFC 85.29 | -- | -- |
| -- | NISG 51.74 | NISG 22.43 | NISG 22.9 | -- | -- |

**Physical Achievements**

| Parameter | 2007-08 | 2008-09 | 2009-10 | 2010-11 (till Dec. 2010) | Total |
|---|---|---|---|---|---|
| Departments / Boards / Corporations | 7 | 19 | 31 | 33 | 90 |
| PSUs / Central Government Organisations | -- | -- | 02 | 03 | 05 |

| | | | | | |
|---|---|---|---|---|---|
| No. of Suppliers Registered | 130 | 1775 | 4420 | 4882 | 11207 |
| No. of Tenders Published | 15 | 1262 | 4883 | 6975 | 13135 |
| Value of Tenders Published (` in crores) | 57.32 | 10226.2 | 25630.4 | 12707.18 | 48621.10 |

### *3.1.2 Bangalore-One :*

The project was started with the objective of providing various G2C and B2C services under a single roof as a one stop shop. It is proposed to establish one centre in each ward. Initially started with 14 centers, there were 63 centres in Bengaluru City as on 25.12.2010. These centres provide over forty services like payment of all bills, taxes etc. The volume of transactions is over 362.16 lakhs. Transactions to the tune of around `. 3000 crores have taken place in these centres. This project has recently been awarded the 'NATIONAL WEB RATNA 2009' award, besides several other awards.

**Financial (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 161 | -- | TFC 237.59 | --- | -- | -- |

**Expenditure (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 48.40 | -- | TFC 748.34 | TFC 9.41 | -- | -- |

**Physical Achievements:**

| Sl No. | Details | Upto 2008 | 2008-2009 | 2009-2010 | 2010-2011 till 25th December 2010 | Progress |
|---|---|---|---|---|---|---|
| 1 | No. of Centres Added | 25 | 11 | 12 | 15 | +38 |
| 2 | No. of Transactions in Lakhs | 119.23 | 76.31 | 96.42 | 74.14 | +127.64 |

### *3.1.3* **Karnataka-One Centres:**

Thirty three Karnataka One centres have been established on the Bangalore One model in tier-two cities of the state, namely, Hubli-Dharwad, Shimoga, Belgaum, Bellary, Mysore, Mangalore, Davanagere, Gulbarga and Tumkur.

**Financial (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| PLAN 100 | -- | PLAN 64 | -- | PLAN 2.50 | -- |

**Expenditure (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| PLAN 65.73 | -- | PLAN 4.98 | PLAN 30 | PLAN 2.35 | PLAN 0.15 |

**Physical Achievements:**

| Sl. No | Details | Upto 2008 | 2008-2009 | 2009-2010 | 2010-2011 till 25th December 2010 | Progress |
|---|---|---|---|---|---|---|
| 1 | No of Cities | 1 | --- | 1 | 7 | +8 |
| 2 | No. of Centres added | 1 | 2 | 4 | 26 | +32 |
| 3 | No.of transactions in Lakhs | 0.51 | 1.50 | 5.21 | 7.83 | +14.54 |

### *3.1.4 Karnataka State Wide Area Network (KSWAN) Project:*

The KSWAN Project, implemented at a cost of over `. 178 crores, was launched on 07.12.2009. This project has established a wide multi-layer network. It has provided data, voice and video services. It has connected all district headquarters to the State headquarters through video services. 2,400 Government offices, covering 56 Departments are connected and I.P. Phones provided to more than 2,900 offices. Government Business Centers have been established in 126 taluk headquarters, which can be availed by all the offices in the taluk headquarters.

**Financial (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 723.39<br>-- | --<br>-- | TFC 545<br>PLAN 5 | --<br>-- | --<br>PLAN 435 | --<br>-- |

**Expenditure (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| -- | -- | TFC 1894.57 | TFC 1157.01 | -- | -- |
| DIT 1.08 | DIT 34 | -- | DIT 72.33 | -- | DIT 842.5 |
| -- | -- | -- | -- | -- | PLAN 440 |

**Physical Achievements:**

a. POPs(Point of Presence) – 179
b. Remote Offices – 2400
c. Government Business centers - 126
d. Number of applications 14 such as Bhoomi, Khajane, E-Procurement, HRMS, Kaveri, Judiciary, Agriculture, Transport, DMA, FC&S,
e. Number of departments using KSWAN – 56
f. Video Conferencing is being used across the departments which include Hon'ble Chief Minister, Ministers, Chief Secretary, Secretaries to the Government and Heads of Departments.

### *3.1.5 AADHAR (UID) Project:*

The ambitious project of the country namely, 'AADHAR' Project has been inaugurated on 08.10.2010. The objective of this project is to give Unique Identification Numbers to all the residents of the state numbering about six crores. It is being implemented on pilot basis in the districts of Mysore and Tumkur. Over 16,13,704 residents have already registered under this project as on 14.02.2011 for the Unique Identification Number. The response from the residents is highly encouraging. With the implementation of this project, the public services are expected to reach the targeted population more effectively and systematically.

### *3.1.6 State Data Centre (SDC):*

The State Data Centre which started functioning during 2004 complies to tier-3 standards. Departmental data is being centralized in this centre. New SDC would be set up at Vikasa Soudha, which would be three times larger than the current data center, at a cost of `. 53crores.

**Financial (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 242 | -- | TFC 637.82 | -- | -- | -- |

**Expenditure (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| TFC 149.92 | -- | TFC 833.53 | TFC 1.43 | -- | -- |

**Physical Achievements:**

| Sl No. | Details | Upto 2008 | 2008-09 | 2009-10 | 2010-2011 (till 25th Dec 2010) | Progress |
|---|---|---|---|---|---|---|
| 1. | No. of Applications hosted | 04 | 10 | 13 | 08 | +31 |
| 2. | No. of Departments | 02 | 05 | 08 | 05 | +18 |

### *3.1.7 Human Resources Management System(HRMS):*

The scheme, which started with assistance from the World Bank, has achieved many milestones in the last two years. 19,200 Drawing and Disbursing Officers are able to disburse salaries to Government servants working under their control through electronic media. Besides, service registers of all the Government servants have also been computerized. Consequently, in future, Government servants will be able to receive their retirement benefits on the day of retirement. This scheme has been extended to several corporations and boards. The Government of Andhra Pradesh is consulting Government of Karnataka for implementing the scheme in Andhra Pradesh.

This scheme has also bagged several awards. Some of them are:

- CSI-Nihilent e-Governance Award 2009
- National e-Governance Award 2010

**Financial (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| -- | PLAN 100 | -- | PLAN 166.25 | -- | PLAN 25 |

**Expenditure (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| -- | PLAN 9 | -- | PLAN 249.48 | -- | PLAN 25 |

**Physical Achievements**

| Main Achievements of HRMS | | | |
|---|---|---|---|
| **Sl No** | **2008-2009** | **2009-10** | **20010-11** |
| 1 | Piloting of pay bill module and extended to all DDOs of the entire State. | Rajbhavan and IRLA Included into HRMS | Extended to staff of fully aided educational institutions numbering a round 70,000. |
| 2 | Collection/updating of non pay bill(Service details) data of around 5 lakh employees | HRMS interface with Khajane successfully piloted | Additional features like generating salary arrears bills is included |
| 3 | Main HRMS application covering transfer, promotion, & report generating modules piloted in Mandya. | As a capacity building measure state level and district level workshops were conducted covering HODs and DDOs numbering around 5000 | Conducted district level workshops as a capacity building measure and trained all DDOs in the State. |
| 4 | Main HRMS application rolled out to entire State during Feb. 2008 | User Manuals were prepared, printed and distributed to all DDOs in the State, | NPS (New Pension scheme) module for employees under HRMS introduced. |
| 5 | As a capacity building measure 3000 masters trainers were trained. | User access provided to Accountant General & KGID to download, GPF, Insurance related data respectively. | Project won the prestigious CSI Nihilent award |

***3.1.8* e-Forms**:

The e-Form project is a Government initiative to facilitate the public to submit forms electronically for various services provided by different Govt. departments. Electronic submission of forms enables citizens to fill in and submit forms to Government electronically anytime and anywhere for obtaining Government services. Currently 408 e-forms are made available in the State Web Portal.

3.1.9 In the first phase all forms are provided in the web for citizens to just download the forms. Action is being taken to facilitate on-line submission of forms.

### *3.2 Other Activities:*

### *3.2.1 Karnataka Government Secretariat LAN (SECLAN):*

The departments of Karnataka Government Secretariat are located in Vidhana Soudha, Vikasa Soudha and M.S. Building. The Secretariat houses one of the biggest Local Area Networks, connecting around 3000 nodes. This Local Area Network was established in the year 2001. With a view to upgrade the existing LAN, tenders were invited. The tender was awarded to M/s TCS and the work has been completed.

**Financial (` in lakhs)**

| 2008-09 | | Revised Estimates 2009-10 | | Budget Estimates 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| PLAN | -- | -- | -- | 93.75 | -- |

**Expenditure (` in lakhs)**

| 2008-09 | | Revised Estimate 2009-10 | | Budget Estimate 2010-11 | |
|---|---|---|---|---|---|
| Capital | Revenue | Capital | Revenue | Capital | Revenue |
| PLAN | -- | -- | -- | 70.13 | -- |

### *3.2.2 Secretariat Automation:*

File Monitoring System (FMS) and Letter Monitoring System (LMS) has been operationalised in the Karnataka Government Secretariat to trace file movement and pending letters. Another package called Document Management System and Court Monitoring System (CMS) has also been operationalised. Under this system the departments of Secretariat can host Government orders, circulars, notifications and corrigenda or addenda on the website for information of general public and officers/staff of Government. Extensive training programme was also undertaken for the secretariat employees on these packages.

### *3.2.3 Flexi time System:*

Flexi system has been implemented successfully for officers in the secretariat, of and above the rank of Section Officers to facilitate optimum utilization of their time and to enhance their efficiency. The system accounts for the number of hours of work put in by these officers. This system is running successfully since 2004. With a view to effectively implement this system, finger print-based bio-metric readers have been installed.

### *3.2.4 Capacity Building:*

a) The officers and staff of various departments of Government of Karnataka have been trained in operating e-procurement platform.
b) Under Nemmadi programme, field level functionaries were trained in the concept of virtual offices at village level. Similarly in the Human Resource Management System (HRMS) package, which has been made fully operational in all Government departments,

nearly 20,000 drawing and disbursing officers have been trained to generate pay bills on-line and district level workshops were conducted to create awareness among the drawing and disbursing officers for updating of the service registers.

### *3.2.5Approval of e-Governance Projects:*

Procedure has been prescribed with regard to formulation, approval and implementation of e-Governance projects. According to this procedure, every department has to prepare an annual e-Governance action plan clearly specifying the projects it would be undertaking for the year. The power to approve these action plans has been given to the committees constituted under the chairmanship of the Principal Secretary to Government, Department of Personnel and Administrative Reforms (e-Governance) and the Chief Secretary respectively, as under:-

(a) The committee constituted under the chairmanship of the Principal Secretary/Secretary to Government, Department of Personnel and Administrative Reforms (e-Governance) has the power to approve e-Governance projects costing upto and equal to `. 1.00 (one) crore: and

(b) The committee constituted under the chairmanship of the Chief Secretary has the power to approve e-Governance projects costing over `. 1.00 (one) crore.

This procedure has helped in avoiding duplication which may occur while setting up of IT infrastructure. It also helps departments to leverage on existing IT infrastructure such as State Data Centre.

3.2.6 During the year 2010-11, e-Governance action plans of 30 departments have been approved, out of which the committee under the chairmanship of Chief Secretary has approved the annual e-Governance action plans of 13 departments. These e-Governance action plans are estimated to cost `. 35850 lakhs.

* * * * *

# 2010–11ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

# PERFORMANCE BUDGET-2010-11

# ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

# Department of Personnel and Administrative Reforms(e-Governance)

## 2010-11ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

1. ಇ-ಆಡಳಿತ ವಿಭಾಗವು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಭಾಗವಾಗಿದೆ. ವಿದುನ್ಮಾಮಾನ ಆಧಾರಿತ ನಾಗರೀಕ ಸೇವೆಗಳ ವಿತರಣಾ ನಿರ್ದೇಶನಾಲಯ ಮತ್ತು ಇ-ಆಡಳಿತ ಕೇಂದ್ರ, ಇವುಗಳು ಇದರ ಆಡಳಿತ ವ್ಯಾಪ್ತಿಯಲ್ಲಿ ಬರುತ್ತವೆ. 2010-11ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ `. 2300.00 (ಎರಡು ಸಾವಿರದ ಮೂನ್ನೂರು) ಲಕ್ಷಗಳನ್ನು ಲೆಕ್ಕಶೀರ್ಷಿಕೆ "3451-00-090-2-04-059 ವಿದ್ಯುನ್ಮಾನ ಆಡಳಿತ ಯೋಜನೆ-ಇತರೆ ವೆಚ್ಚಗಳು (ಯೋಜನೆ)" ಯಡಿಯಲ್ಲಿ ಮತ್ತು ಅದೇ ಲೆಕ್ಕ ಶೀರ್ಷಿಕೆಯಡಿಯಲ್ಲಿ ಯೋಜನೇತರ ಅಡಿಯಲ್ಲಿ ` 176.80 (ಒಂದು ನೂರ ಎಪ್ಪತ್ತಾರು ಲಕ್ಷ ಎಂಭತ್ತು ಸಾವಿರ) ಒದಗಿಸಲಾಗಿದೆ. ಸದರಿ ಅನುದಾನಗಳ ಪೈಕಿ ಯೋಜನೆ ಬಾಬ್ತಿನ `. 2300.00 (ಎರಡು ಸಾವಿರದ ಮೂನ್ನೂರು) ಲಕ್ಷಗಳನ್ನು ವಿವಿಧ ಬಾಬ್ತುಗಳಿಗಾಗಿ ಈ ಕೆಳಕಂಡತೆ ಹಂಚಿಕೆ ಮಾಡಲಾಗಿದೆ:-

| ಕ್ರ. ಸಂ. | ಬಾಬ್ತು | ಹಂಚಿಕೆ ಮಾಡಲಾದ ಮೊತ್ತ (` ಲಕ್ಷಗಳಲ್ಲಿ) |
|---|---|---|
| 1 | ಕರ್ನಾಟಕ ಸರ್ಕಾರದ ಸಚಿವಾಲಯದ ವಿವಿಧ ಇಲಾಖೆಗಳಿಗೆ ಬೇಕಾಗುವ ಗಣಕ ಯಂತ್ರಗಳು, ಸರ್ವರ್‌ಗಳು, ಯು.ಪಿ.ಎಸ್‌ಗಳು, ಪ್ರಿಂಟರ್‌ಗಳು, ಪೂರಕ ಸಾಮಗ್ರಿಗಳೊಂದಿಗೆ ಅಂದರೆ ಇತರೆ ವೈರ್‌ಲೆಸ್ ಹಾಗೂ ನೆಟ್‌ವರ್ಕ್ ಸಾಧನಗಳು ಇತ್ಯಾದಿ ಮತ್ತು ಅವಶ್ಯವಿರುವ ಸಾಫ್ಟ್‌ವೇರ್‌ಗಳನ್ನು ಖರೀದಿಸಲು | 500.00 |
| 2 | ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿರುವ ಗಣಕಯಂತ್ರಗಳು, ಪ್ರಿಂಟರ್‌ಗಳು, ಸರ್ವರ್‌ಗಳು, ಯು.ಪಿ.ಎಸ್‌ಗಳು, ಮುಂತಾದ ಹಾಡ್‌ವೇರ್‌ಗಳ ವಾರ್ಷಿಕ ನಿರ್ವಹಣೆ, ಲೋಕಲ್ ಏರಿಯಾ ನೆಟ್‌ವರ್ಕ್‌ನ ಕ್ರಿಯಾ ರಹಿತ ಘಟಕಗಳ (Active and Passive Components) ವಾರ್ಷಿಕ ನಿರ್ವಹಣೆ ಮತ್ತು ಲೋಕಲ್ ಏರಿಯಾ ನೆಟ್‌ವರ್ಕ್‌ನ ಸೌಲಭ್ಯ ನಿರ್ವಹಣೆ (Facility Management) ವಾರ್ಷಿಕ ನಿರ್ವಹಣೆ ಕೆಲಸಗಳಿಗಾಗಿ. | 192.00 |
| 3 | ರಾಜ್ಯ ಮಾಹಿತಿ ಕೇಂದ್ರದ ಚಾಲನೆ ಮತ್ತು ನಿರ್ವಹಣೆ, ವಿವಿಧ ಇಲಾಖೆಗಳು ಇದನ್ನು ಬಳಸಲು ಬೇಕಾಗುವ ಸರ್ವರ್‌ಗಳು, ವಿಸ್ತರಣಾ ಸಲಕರಣೆಗಳು, ಮಾಹಿತಿ ತಂತ್ರಜ್ಞಾನ, ಮೂಲಭೂತ ಸೌಕರ್ಯಗಳ ಖರೀದಿ ಹಾಗೂ ಮಾಹಿತಿ ಕೇಂದ್ರ ಆಡಳಿತ, ನೆಟ್‌ವರ್ಕ್ ಆಡಳಿತ ಹಾಗೂ ಕ್ಷೇತ್ರೀಯ | 500.00 |

| | | |
|---|---|---|
| | ಆಡಳಿತಕ್ಕಾಗಿ ತಜ್ಞ ಮಾನವ ಶಕ್ತಿಯನ್ನು ಬಾಡಿಗೆಯ ಆಧಾರದ ಮೇಲೆ ಪಡೆಯಲು | |
| 4 | ಕರ್ನಾಟಕ ವೆಬ್‌ಸೈಟ್‌ನ್ನು ಮರುವಿನ್ಯಾಸಗೊಳಿಸಲು ಮಾರುಕಟ್ಟೆಯಿಂದ ಸಂಪನ್ಮೂಲಗಳನ್ನು ಬಾಡಿಗೆಗೆ ಪಡೆಯುವುದು, ಇಲಾಖೆಗಳು ತಮ್ಮ ವೆಬ್‌ಸೈಟ್‌ಗಳನ್ನು ಪ್ರದರ್ಶಿಸಿಲು ರಾಜ್ಯ ಮಾಹಿತಿ ಕೇಂದ್ರದ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಸಹಾಯ ನೀಡುವುದು ಮತ್ತು ಇಡೀ ಕರ್ನಾಟಕ ಸರ್ಕಾರಕ್ಕೆ ಒಂದೇ ಪೋರ್ಟಲ್ ರಚಿಸಲು ಮತ್ತು ಇಂದೀಕರಿಸಲು ಸೂಕ್ತವಾದ ಯಾಂತ್ರಿಕ ಸಂಯೋಜನೆ ತಯಾರಿಸಲು | 35.00 |
| 5 | ಗ್ರಾಮೀಣ ಡಿಜಿಟಲ್ ಸೇವೆಗಳ ಯೋಜನೆ (RDS) ಅಂದರೆ ನೆಮ್ಮದಿ ಯೋಜನೆಯಡಿ ಸ್ಥಾಪಿಸಿರುವ ಟೆಲಿಸೆಂಟರ್ ಮೂಲಕ ಸೇವೆಗಳನ್ನು ಹೆಚ್ಚಿಸಲು ವಿವಿಧ ಇಲಾಖೆಗಳ ಆಂತರಿಕ ಪ್ರಕ್ರಿಯೆಗಳನ್ನು (Backend Process ನ) ಪದ್ಧತಿಗಳನ್ನು ಹೆಚ್ಚಿಸುವುದು ಇದಲ್ಲದೆ, ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸ್ಥಾಪಿಸಿರುವ Central Monitoring cell ನ ಸಿಬ್ಬಂದಿ ವೆಚ್ಚ ಭರಿಸಲು | 50.00 |
| 6 | ಸಿಆಸುಇ(ಇ-ಆಡಳಿತ)ದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು | 21.50 |
| 7 | ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಇಲಾಖೆಗಳಿಗೆ ಬಾಹ್ಯ ಮೂಲಕ ನೆಟ್‌ವರ್ಕ್ ಪ್ರಿಂಟರ್ ಸೇವೆಯನ್ನು ಲಭ್ಯಗೊಳಿಸಲು ಹಾಗೂ ಮುದ್ರಣ ವೆಚ್ಚಗಳನ್ನು ಪಾವತಿಸಲು | 160.00 |
| 8 | ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳ ಹಾಜರಾತಿ ನಿರ್ವಹಣೆ ಪದ್ಧತಿ (AMS) ನಿರ್ವಹಣೆಗಾಗಿ | 4.00 |
| 9 | ಕರ್ನಾಟಕ ಒನ್-ಬೆಂಗಳೂರು-ಒನ್ ಯೋಜನೆಯನ್ನು ಇತರ ನಗರಗಳಿಗೆ ವಿಸ್ತರಿಸಲು ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ಅಗತ್ಯವಾದ ತಾಂತ್ರಿಕ ನೆರವು ನೀಡಲು | 202.50 |
| 10 | ಬೆಂಗಳೂರಿನಲ್ಲಿ ಬೆಂಗಳೂರು-ಒನ್ ಯೋಜನೆಯ ವಿಸ್ತರಣೆಗೆ ಅವಶ್ಯವಿರುವ ನಿವೇಶನ ತಯಾರಿಕೆ, ಬ್ಯಾಕ್‌ಎಂಡ್ ತಂತ್ರಾಂಶ ಸೃಜನೆ ಮುಂತಾದವುಗಳಿಗಾಗಿ | 150.00 |
| 11 | ಮಾನವ ಸಂಪನ್ಮೂಲ ನಿರ್ವಹಣೆ ಪದ್ಧತಿ ನಿರ್ವಹಣೆ, ಯೋಜನೆಗೆ ವೇತನ ಮತ್ತು ಇತರೆ ವೆಚ್ಚಗಳಿಗೆ | 50.00 |
| 12 | ಕರ್ನಾಟಕ ರಾಜ್ಯ ವಿಸ್ತೃತ ಜಾಲ (KSWAN) ಯೋಜನೆಯ ಅನುಷ್ಠಾನಕ್ಕಾಗಿ ಬೇಕಾಗುವ ವೆಚ್ಚ ಹಾಗೂ ಸಿಬ್ಬಂದಿ ವೆಚ್ಚಗಳನ್ನು ಭರಿಸಲು | 435.00 |

| | |
|---|---|
| **ಒಟ್ಟು** | 2,300.00 |

2. ಯೋಜನೇತರ ಬಾಬ್ತಿನ ಅನುದಾನ ` 176.80 ಲಕ್ಷಗಳನ್ನು ಇತರೆ ಬಾಬ್ತುಗಳ ಜೊತೆಗೆ, ಕರ್ನಾಟಕ ಸರ್ಕಾರಿ ಸಚಿವಾಲಯದ ಲ್ಯಾನ್ ನೆಟ್‌ವರ್ಕ್‌ನಲ್ಲಿ ಉಂಟಾಗುವ ಸಾಫ್ಟ್‌ವೇರ್ ತೊಂದರೆಗಳ ನಿವಾರಣೆಗಾಗಿ ಒಪ್ಪಂದದ/ಬಾಹ್ಯಮೂಲ ಆಧಾರದ ಮೇಲೆ ಪಡೆದಿರುವ ಸಮಾಲೋಚಕರುಗಳಿಗೆ ಮಾಸಿಕ ಸಂಭಾವನೆ ಪಾವತಿಸಲು ಹಾಗೂ ಕರ್ನಾಟಕ ಸರ್ಕಾರಿ ಸಚಿವಾಲಯದ ವಿವಿಧ ಇಲಾಖೆಗಳಲ್ಲಿನ ಸ್ವೀಕೃತಿ ಮತ್ತು ರವಾನೆ ಶಾಖೆಗಳಲ್ಲಿ ಕಾರ್ಯನಿರ್ವಹಿಸಲು ಬಾಹ್ಯಮೂಲದಿಂದ ಪಡೆದುಕೊಂಡಿರುವ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಮಾಸಿಕ ಸಂಭಾವನೆ ಪಾವತಿಸಲು ಉಪಯೋಗಿಸಿಕೊಳ್ಳಲಾಗಿದೆ. ಇದಲ್ಲದೇ, ಇಲಾಖೆಯ ಉಪಯೋಗಕ್ಕೆ ಬೇಕಾಗುವ ವಿವಿಧ ಲೇಖನ ಸಾಮಗ್ರಿಗಳನ್ನು ಮತ್ತು ಕೆಲವು ಹಾರ್ಡ್‌ವೇರ್‌ಗಳನ್ನು ಖರೀದಿಸಲು ತಗಲುವ ವೆಚ್ಚಗಳನ್ನು ಅದರಡಿಯಲ್ಲಿ ಭರಿಸಲಾಗಿರುತ್ತದೆ.

3. ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯನ್ನು 2010-11ನೇ ಸಾಲಿನಿಂದ ಅನ್ವಯಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ಯಿಂದ ಲೆಕ್ಕ ಶೀರ್ಷಿಕೆ "2070-00-800-0-04-125 (ಯೋಜನೆ)"ಯೊಂದಿಗೆ ದಿನಾಂಕ: 02.02.2011ರ ಆದೇಶ ಸಂಖ್ಯೆ: ಸಿಆಸುಇ 230 ಇಆತ 2010 ರನ್ವಯ ಶಾಶ್ವತವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಗೆ ವರ್ಗಾಯಿಸಲಾಗಿದೆ. ಇದರಡಿಯಲ್ಲಿ ` 70.00 (ಎಪ್ಪತ್ತು) ಲಕ್ಷಗಳ ಅನುದಾನವನ್ನು 2010-11ನೇ ಸಾಲಿಗಾಗಿ ಒದಗಿಸಲಾಗಿದ್ದು, ಅದನ್ನು ಸರ್ಕಾರಿ ಕಛೇರಿಗಳಲ್ಲಿ ಕಾಗದ ರಹಿತ ತಂತ್ರಾಂಶದ ಅಭಿವೃದ್ಧಿ/ಕಛೇರಿಗಳ ಕಂಪ್ಯೂಟರೀಕರಣಕ್ಕಾಗಿ ಬಳಸಲಾಗಿದೆ.

*******

## Performance Budget for 2010-11
## Department of Personnel and Administrative Reforms (e-Governance)

1. e-Governance division is a part of the Department of personnel and Administrative Reforms. It has. The Directorate of Electronic Delivery of Citizen Services and the Centre for e–Governance are under its administrative control. During the year 2010-11 an amount of `. 2300 (Two Thousand Three Hundred) lakhs was provided under the head of account "3451-00-090-2-04-059 e-Governance project-other expenses (Plan)" and an amount of `. 176.80 (`. One hundred seventy six lakhs and eighty thousand) was provided under non-plan under the same head of account. The said provision of `.2300.00 (Two Thousand Three Hundred) lakhs under plan has been allocated for various schemes as under :-

| Sl. No | Item | Amount allocated |
|---|---|---|
| 1. | Procurement of computers, servers, UPS, printers and other computer peripherals like wireless equipments, network components, required software etc for Karnataka Government Secretariat. | 500.00 |
| 2. | Annual Maintenance Contract of computers, servers, UPS, printers and other hardware components of Karnataka Government Secretariat including active and passive components of LAN. Annual Maintenance and Facility Management of IT Infrastructure. | 192.00 |
| 3. | State Data Centre – operation and maintenance of SDC, server requirements to host applications of new departments, expansion components, procurement of basic IT infrastructure and administration of SDC. Network management and hiring of | 500.00 |

| | | |
|---|---|---|
| | technical resources for operating SDC | |
| 4. | Hiring of resources / company for revamping of website of Karnataka Government. Assisting various Government departments to develop and maintain the websites. Creating a single and unified web portal for all the departments of Government of Karnataka | 35.00 |
| 5. | Rural Digital Services (RDS) – To strengthen the backends of various departments to make them e-ready for delivering their services through telecentres established under Nemmadi project. To bear the expenses of resources hired for Central Monitoring Cell of Nemmadi project to work for Rural Digital Services. | 50.00 |
| 6 | Expenditure towards conducting training in DPAR(e-Governance) | 21.50 |
| 7 | Providing outsourced network printing services to various departments in Karnataka Government Secretariat | 160.00 |
| 8 | Maintenance of AMS in Karnataka Government Secretariat | 4.00 |
| 9 | KarnatakaOne project-Expansion of Bangalore One Centers to Other Cities- development of infrastructure and providing necessary technical assistance | 202.50 |
| 10 | Development of infrastructure for Bangalore one Centers | 150.00 |
| 11 | Salaries and other expenditure under HRMS | 50.00 |
| 12 | KSWAN Project implementation and staff expenditure | 435.00 |
| | **Total** | **2,300.00** |

2. So far as the non-plan provision of `.176.80 Lakhs, referred to above is concerned, the same has, inter alia, been utilized for payment of remuneration to consultants and data entry operators. The consultants have been appointed on contract/outsourced basis to attend to the day to day problems relating to the Local Area Network of the Karnataka Government Secretariat and any software issues related thereto. The data entry operators have been engaged on outsourcing basis to work in R & I Sections of the departments of the Karnataka Government Secretariat.

Besides, the non-plan provision has been utilized to meet stationery and some of the hardware requirements.

3. The scheme of modernization of Government offices was transferred permanently from the Department of Personnel and Administrative Reforms (Administrative Reforms) to the Department of Personnel and Administrative Reforms (e-Governance) along with the head of account, namely, "2070-00-800-0-04-125 (plan)" with effect from the year 2010-11 as per the Government Order No: DPAR 230 E Aa Tha 2010 dated: 02.02.2011. A budget provision of `. 70 (seventy) lakhs was made under the said head of account for the year 2010-11. It was utilized for developing paperless software/computerization of Government offices.

*****